C.C- 69/2025

ಪಿ. ಡಬ್ಲೂ - 2

ಸಾಕ್ಷಿಯನ್ನು ದಿಃ 23.08.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಎ.ಬಿ ರವರಿಂದಃ**

ನನ್ನ ಹೆಸರಿಗೆ 31 ಗುಂಟೆ ಜಮೀನು ಮುಡುಗೋಡು ಗ್ರಾಮದಲ್ಲಿ ಇದೆ. ನನಗೆ ಇಬ್ಬರು ಮಕ್ಕಳು. ಅವರೆಂದರೆ ಸುಮಂತ ಮತ್ತು ಶ್ರಿಪಾದ. ಸುಮಂತ ಮತ್ತು ಅವನ ಪತ್ನಿ ಬೆಂಗಳೂರಿನಲ್ಲಿ ವಾಸವಿದ್ದಾರೆ. ದಿನಾಂಕ 31.07.2013 ರಂದು ಆಸ್ತಿಯ ಕುರಿತು ನನಗೆ ಸುಮಂತರವರು ಒಂದು ಜಿಪಿಎ ಮಾಡಿಕೊಟ್ಟಿದ್ದರು. ದಿನಾಂಕ 31.07.2013 ರಂದು ಸುಮಂತನಿಗೆ ಮದುವೆಯಾಗಿರಲಿಲ್ಲ. ದಿನಾಂಕ 31.07.2013 ರ ಜಿಪಿಎ ನಲ್ಲಿ ಮಾರಾಟ ಮಾಡುವುದನ್ನು ಹೊರತು ಪಡಿಸಿ ಉಳಿದ ಎಲ್ಲಾ ಅಧಿಕಾರವನ್ನು ನನಗೆ ಕೊಟ್ಟಿದ್ದಾರೆ.

ಆರೋಪಿತನು ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ಆರೋಪಿತನ ಹೆಂಡತಿ ಮುಡಗೋಡಿನ ವಾಸಿ ಎಂದರೆ ಸರಿ. ನನ್ನ ಮತ್ತು ಆರೋಪಿತನ ಹೆಂಡತಿಯ ಮನೆ ನಡುವೆ ಒಂದು ಫರ್ ಲಾಂಗ್ ದೂರವಿದೆ. ಆರೋಪಿತನು ಸದರಿ ಪರಿಚಯವಾದ ಅವಧಿಯಲ್ಲಿ ನನ್ನ ಬಳಿ ಅಡಿಕೆ ತೆಗೆದುಕೊಳ್ಳುತ್ತಿದ್ದನು. ಸುಮಾರು 2-3 ಬಾರಿ ಆರೋಪಿತನು ನನ್ನಿಂದ ಅಡಿಕೆ ಖರೀದಿ ಮಾಡಿದ್ದಾನೆ. ಆರೋಪಿತನು ಗುತ್ತಿಗೆ ಆಧಾರದ ಮೇಲೆ ಹಾಗೂ ರೆಡಿಯಾಗಿರುವ ಅಡಿಕೆಯನ್ನು ಸಹ ಖರೀದಿ ಮಾಡುತ್ತಾನೆ.ಅಡಿಕೆಯನ್ನು ಗುತ್ತಿಗೆಗೆ ಕೊಟ್ಟಾಗ ಪರಿಚಯ ಇಲ್ಲದವರ ಬಳಿ ಕರಾರನ್ನು ಮಾಡಿಕೊಳ್ಳುತ್ತೇವೆ. ಆರೋಪಿತನಿಗೆ ನಾನು ರಾಶಿ ಹಿಡಿ ಕೆಂಪು ಅಡಿಕೆಯನ್ನು ಕೊಟ್ಟಿದ್ದೇನೆ. ಆರೋಪಿತನಿಗೆ ಯಾವುದೇ ಛೇಣಿ ಅಡಿಕೆಯನ್ನು ಮಾಡಿಲ್ಲ. ಆರೋಪಿತನಿಗೆ ಮೂರು ಬಾರಿ ಅಡಿಕೆಯನ್ನು ನಾನು ಮಾರಿದ್ದು, ಅದು ಯಾವ ವರ್ಷ ಎಂದು ಈಗ ನನಗೆ ನೆನಪಿಲ್ಲ. 2024 ರಲ್ಲಿ 50 ಸಾವಿರ ರೂ.ಗಳಂತೆ 4 ಕ್ವಿಂಟಲ್ ಅಡಿಕೆಯನ್ನು ನಾನು ಆರೋಪಿತನಿಗೆ ಮಾರಿದ್ದೇನೆ. 2023 ರಲ್ಲಿ ಎಷ್ಟು ಅಡಿಕೆಯನ್ನು ಮಾರಿದ್ದೆ ಎಂದು ಈಗ ನನಗೆ ನೆನಪಿಲ್ಲ. ಆರೋಪಿತನು ಖರೀದಿ ಮಾಡಿದ ಅಡಿಕೆಯನ್ನು ಹೇಗೆ ತೆಗೆದುಕೊಂಡು ಹೋದ ಎಂದು ನನಗೆ ಗೊತ್ತಿಲ್ಲ. ಸದರಿ ನಾನು ಮಾರಿದ ಅಡಿಕೆ ನನ್ನ ಮನೆಯ ಮುಂದೆಯೇ ಇತ್ತು. ಅಡಿಕೆ ಬೆಳೆಗೆ ನಾನು ಮಾಡಿದ ಖರ್ಚು ಎಂದು ಪ್ರತೀ ದಿನ ಪುಸ್ತಕದಲ್ಲಿ ಅಥವಾ ದಿನಚರಿಯಲ್ಲಿ ಬರೆಯುವುದಿಲ್ಲ.

ದಿನಾಂಕ 31.07.2024 ರಂದು ನನ್ನ ಮತ್ತು ಆರೋಪಿತನ ನಡುವೆ ಜಮೀನಿನ ಕ್ರಯದ ವ್ಯವಹಾರ ನಮ್ಮ ಮನೆಯಲ್ಲಿ ಆಯಿತು. ಆಗ ನಾನು ಮತ್ತು ಆರೋಪಿತನು ಮಾತ್ರ ಇದ್ದೆವು. ನಾನು ಆರೋಪಿತನಿಗೆ ಮಾರಾಟ ಮಾಡಿದ ಜಮೀನಿನ ಪಕ್ಕದಲ್ಲಿ ಆರೋಪಿತನು ಅಡಿಕೆ ಸಂಸ್ಕರಣಾ ಯಂತ್ರವನ್ನು ಇಟ್ಟುಕೊಂಡಿದ್ದನು. ಆ ಜಮೀನು ನಮ್ಮದಲ್ಲ. ಅದನ್ನು ಆರೋಪಿತನು ಬಾಡಿಗೆಗೆ ಪಡೆದು ಸಂಸ್ಕರಣಾ ಯಂತ್ರವನ್ನು ನಡೆಸುತ್ತಿದ್ದನು. ತನಗೆ ಬಾಡಿಗೆ ಉಳಿತಾಯ ಆಗುತ್ತದೆ ಎಂದು ಆರೋಪಿತನು ನಮ್ಮ ಜಮೀನನ್ನು ಖರೀದಿ ಮಾಡಿದನು. ಆ ಜಮೀನನ್ನು ಫಿರ್ಯಾದಿಯ ಹಣದ ಅಡಚಣೆಗಾಗಿ ಮಾರಾಟ ಮಾಡಿದ್ದಾನೆ. 4,50,000/- ರೂ.ಗಳಿಗೆ ನಮ್ಮ ಜಮೀನನ್ನು ಆರೋಪಿತನಿಗೆ ಮಾರಿದ್ದೇನೆ. ಆರೋಪಿತನು ಸದರಿ ಖರೀದಿ ಬಾಪ್ತು ದಿನಾಂಕ 01.08.2024 ರಂದು 2 ಲಕ್ಷ ರೂ.ಗಳನ್ನು ಮುಂಗಡವಾಗಿ ನನ್ನ ಖಾತೆಗೆ ವರ್ಗಾವಣೆ ಮಾಡಿದ್ದಾನೆ ಎಂದರೆ, ಸಾಕ್ಷಿಯು ಅದು ಅಡಿಕೆ ಖರೀದಿ ಮಾಡಿದ ಹಣವಾಗಿರುತ್ತದೆ.

ದಿನಾಂಕ 01.08.2024 ರ ಪೂರ್ವದಲ್ಲಿ ಆರೋಪಿತನಿಗೆ ಅಡಿಕೆಯನ್ನು ನಾನು ಮಾರಾಟ ಮಾಡಿದ್ದ ಕುರಿತು ನನ್ನ ಬಳಿ ದಾಖಲೆಗಳು ಇಲ್ಲ. ಮುಂದುವರೆದು ಆ ದಾಖಲೆಗಳನ್ನು ಆರೋಪಿತನೇ ಕೊಡಬೇಕು ಎನ್ನುತ್ತಾರೆ. ನನ್ನ ಜಮೀನಿನಲ್ಲಿ ಅಡಿಕೆ ಬೆಳೆಯುತ್ತಿದ್ದೇನೆ ಎನ್ನುವ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದು ಇದೆ. ಸರ್ವೇ ನಂಬರ್ 1/10 ರ ಜಮೀನಿನ ಮಾತುಕತೆಗೆ ನಾನು ಮತ್ತು ಆರೋಪಿತನು ಕುಳಿತಾಗ ನನ್ನ ಮಗ ಸುಮಂತನಿಗೆ ಮಾಹಿತಿಯನ್ನು ತಿಳಿಸಿದ್ದೆ. 4,50,000/- ರೂ.ಗಳಿಗೆ ಕ್ರಯದ ಮಾತುಕತೆಯಾಗಿದ್ದು, ಆರೋಪಿತನು ಮುಂಗಡ ಹಣವಾಗಿ ಫಿರ್ಯಾದಿಗೆ ಯಾವುದೇ ಹಣವನ್ನು ಕೊಡಲಿಲ್ಲ. ಮುಂಗಡ ಹಣ ಪಡೆಯದೇ ಆರೋಪಿತನಿಗೆ ಕ್ರಯ ಪತ್ರವನ್ನು ಆರೋಪಿತನಿಗೆ ನೊಂದಣಿ ಮಾಡಿಕೊಟ್ಟಿದ್ದೇನೆ.

ನಮ್ಮ ಜಮೀನನ್ನು ಆರೋಪಿತನಿಗೆ ಮಾರಾಟ ಮಾಡುವುದಾಗಿ ಅವನೊಂದಿಗೆ ಯಾವುದೇ ಕರಾರನ್ನು ಮಾಡಿಕೊಂಡಿಲ್ಲ. ಫಿರ್ಯಾದಿಯು ಬೆಂಗಳೂರಿನಲ್ಲಿರುವುದರಿಂದ ಸದರಿ ಜಮೀನಿನ ಕ್ರಯದ ಕುರಿತು ನಾನು ಮತ್ತು ಆರೋಪಿತನು ಕರಾರನ್ನು ಮಾಡಿಕೊಂಡಿದ್ದು, ಅದಕ್ಕೆ ನಾನು, ಆರೋಪಿತನು ಮತ್ತು ನಮ್ಮ ಊರಿನ ಸೋಮುರವರು ಸಾಕ್ಷಿದಾರ ಎಂದು ಸಹಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಆ ಕರಾರು ಪತ್ರ ನನ್ನ ಬಳಿ ಇದ್ದು, ಅದರ ನಕಲನ್ನು ಆರೋಪಿತನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಾತುಕತೆಯಾದ 2 ತಿಂಗಳ ಒಳಗಾಗಿ ನೊಂದಣಿ ಮಾಡಿಸಬೇಕು ಎಂದು ಮಾತನಾಡಿದ್ದೆವು. ಆ ಸಂದರ್ಭದಲ್ಲಿ ಆರೋಪಿತನು ಯಾವುದೇ ಚೆಕ್ ಅನ್ನು ಕೊಟ್ಟಿರಲಿಲ್ಲ. ಮಾತುಕತೆಯಾದ ಸುಮಾರು 2 ತಿಂಗಳ ಒಳಗಾಗಿ ಕ್ರಯ ಪತ್ರ ನೊಂದಣಿಯಾಯಿತು.

ದಿನಾಂಕ 10.10.2024 ರಂದು ಫಿರ್ಯಾದಿಯು ಬೆಂಗಳೂರಿನಿಂದ ಬಂದಿದ್ದಾನೆ ನೊಂದಣಿ ಮಾಡಿಕೊಳ್ಳೋಣಾ ಎಂದು ನಾನು ಆರೋಪಿತನಿಗೆ ತಿಳಿಸಿದ್ದು, ಆ ದಿನ ನೊಂದಣಿಯಾಗಲಿಲ್ಲ ಎಂದರೆ ಸರಿ. ದಿನಾಂಕ 18.10.2024 ರಂದು ಕ್ರಯ ಪತ್ರ ನೊಂದಣಿಯಾಗಿದೆ ಎಂದರೆ ಸರಿ. ಕ್ರಯದ ಪ್ರತಿಫಲದ ಪೈಕಿ ಎರಡು ಲಕ್ಷ ರೂ.ಗಳನ್ನು ಈಗಾಗಲೇ ಆರೋಪಿತನು ನನಗೆ ಖಾತೆ ಮೂಲಕ ವರ್ಗಾವಣೆ ಮಾಡಿದ್ದು, ಇನ್ನು 2,50,000/- ರೂ.ಗಳು ಕೊಡುವುದು ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರ ನೊಂದಣಿಯಾದಾಗ ನಾನು ಸಾಕ್ಷಿದಾರನಾಗಿ ಹಾಜರಿದ್ದೆ. ನೊಂದಣಿ ಕಾಲಕ್ಕೆ ಪತ್ರ ಬರಹಗಾರರು ನಿಪಿ-1 ರ ಚೆಕ್ ಅನ್ನು ಬರೆದರು. ನಿಪಿ-1 ಅನ್ನು ಫಿರ್ಯಾದಿ ಸುಮಂತ ಬರೆದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಅನ್ನು ನನ್ನ ಮಗ ಬರೆದಿದ್ದಾನೆ ಅಥವಾ ಅಲ್ಲ ಎಂದು ಫಿರ್ಯಾದನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ.

ನನ್ನ ಮಗ ಬೆಂಗಳೂರಿನ ಕತ್ರಿಗುಪ್ಪೆಯಲ್ಲಿ ವಾಸ ಮಾಡುತ್ತಿದ್ದು, ಇಂಜೇನಿಯರ್ ಅಂತ ಕೆಲಸ ಮಾಡುತ್ತಿದ್ದಾನೆ. ದಿನಾಂಕ 19.10.2024 ರಂದು ನಿಪಿ-1 ಅನ್ನು ಅದೇ ದಿನ ಬ್ಯಾಂಕಿಗೆ ಹಾಕುತ್ತೇವೆ ಎಂದು ಆರೋಪಿತನಿಗೆ ನಾವು ಹೇಳಿದೆವು ಎಂದರೆ ಸರಿ. ಆಗ ಆರೋಪಿತನು ಈಗಾಗಲೇ 2 ಲಕ್ಷ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ್ದು, ಆ ಹಣವನ್ನು ವಾಪಸ್ಸು ಕೊಟ್ಟು ನಿಪಿ-1 ರ ಚೆಕ್ ಅನ್ನು ಬ್ಯಾಂಕಿಗೆ ಹಾಕಿದರೆ ಕ್ರಯದ ಪ್ರತಿಫಲ 4,50,000/-ಆಗುತ್ತದೆ ಎಂದು ಹೇಳಿದ ಎಂದರೆ ಸರಿಯಲ್ಲ. ಆರೋಪಿತನಿಂದ ಪಡೆದ 2 ಲಕ್ಷ ಮುಂಗಡ ಹಣವನ್ನು ನಾವು ವಾಪಸ್ಸು ಕೊಡದೆ ಅವನಿಂದ ಅಕ್ರಮ ಲಾಭ ಪಡೆಯಲು ನಿಪಿ-1 ರ ಚೆಕ್ ಅನ್ನು ಬ್ಯಾಂಕಿಗೆ ಹಾಕಿ ಈ ದೂರನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಕ್ರಯ ಪತ್ರ ನೊಂದಣಿಯಾದ ನಂತರ ಸ್ವತ್ತಿನ ಖರೀದಿದಾರರು ಅಸಲು ಕ್ರಯ ಪತ್ರವನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ. ನೊಂದಣಿಯಾದ ದಿನದಂದು ಅಸಲು ಕ್ರಯ ಪತ್ರವನ್ನು ಆರೋಪಿತನಿಗೆ ನಾನು ಕೊಟ್ಟಿಲ್ಲ ಎಂದರೆ ಸರಿ. ಆ ಕ್ರಯ ಪತ್ರವು ಈಗ ನನ್ನ ಬಳಿ ಇಲ್ಲ, ಅದನ್ನು ಕೋರ್ಟಿಗೆ ಹಾಕಿದ್ದೇನೆ. ಆ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಬೇಡಿ ಎಂದು ನಾನು ತಕರಾರನ್ನು ತಹಶೀಲ್ದಾರ್ ರವರಿಗೆ ಕೊಟ್ಟಿದ್ದೇನೆ ಎಂದರೆ ಸರಿ. ತಕರಾರನ್ನು ನೀಡಿದ ದಿನಾಂಕ ನನಗೆ ನೆನಪಿಲ್ಲ. ತಹಶೀಲ್ದಾರ್ ರವರು 2.5 ಲಕ್ಷ ಬಾಕಿ ಹಣವನ್ನು ತೆಗೆದುಕೊಂಡು ರಾಜೀ ಮಾಡಿಕೊಳ್ಳಿ ಎಂದು ನನಗೆ ಹೇಳಿದರು ಎಂದರೆ ಸರಿಯಲ್ಲ.

ಕೆಂಪು ಅಡಿಕೆಯನ್ನು ಜಿ ಎಸ್ ಟಿ ಹೋಲ್ಡರ್ ರವರು ಮಾತ್ರ ಖರೀದಿ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ಎಪಿಎಂಸಿಯಲ್ಲಿಯೂ ಸಹ ಅಡಿಕೆಯನ್ನು ಮಾರಾಟ ಮಾಡಿದ್ದೇನೆ.

ಆರೋಪಿತನು ಜಿಎಸ್‌ಟಿ ಹೋಲ್ಡರ್ ದಾರ ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ನಾನು ಆರೋಪಿತನಿಗೆ ಅಡಿಕೆಯನ್ನು ಮಾರಾಟ ಮಾಡಿದರೆ ಅವನು ಖರೀದಿ ಬಾಪ್ತು ರಶೀದಿಯನ್ನು ಕೊಡುತ್ತಿದ್ದ ಎಂದರೆ ಸಾಕ್ಷಿಯು ಆರೋಪಿತನು ನನಗೆ ಅಡಿಕೆ ಖರೀದಿ ಬಿಲ್ಲನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಅಡಿಕೆ ಖರೀದಿ ರಶೀದಿಗಳನ್ನು 3 ತಿಂಗಳಿಗೊಮ್ಮೆ ಲೆಕ್ಕ ಪರಿಶೋಧಕರಿಗೆ ಕೊಟ್ಟು ಈ ಬಗ್ಗೆ ಆದಾಯ  ತೆರಿಗೆ ವಿವರಗಳನ್ನು ಇಲಾಖೆಗೆ ಸಲ್ಲಿಸಬೇಕು ಎಂದರೆ ನನಗೆ ಗೊತ್ತಿಲ್ಲ. ಆರೋಪಿತನು ನಾನು ಹೇಳಿದಂತೆ ನನ್ನ ಬಳಿ ಅಡಿಕೆ ಖರೀದಿ ಮಾಡಿದ್ದರೆ ತನ್ನ ಆದಾಯ ತೆರಿಗೆ ದಾಖಲೆಗಳಲ್ಲಿ ಉಲ್ಲೇಖ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಆರೋಪಿತನ ಕೆನರಾ ಬ್ಯಾಂಕಿನ ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್ ಅನ್ನು ತೋರಿಸಿ ಅದರಂತೆ ದಿನಾಂಕ 01.08.2024 ರಂದು ನೆಫ್ಟ್ ಮೂಲಕ 2 ಲಕ್ಷ ರೂ.ಗಳನ್ನು ಆರೋಪಿತನು ನನ್ನ ಖಾತೆಗೆ ವರ್ಗಾವಣೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಆಸ್ತಿ ಖರೀದಿ ಸಂಬಂಧ ಪಾವತಿ ಮಾಡಿರುವುದಾಗಿ ಆದಾಯ ತೆರಿಗೆ ದಾಖಲೆಗಳಲ್ಲಿ ಉಲ್ಲೇಖ ಮಾಡಿ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.